**ಕರ್ನಾಟಕ ಸರ್ಕಾರ**

**ಉಪ ನಿರ್ದೇಶಕರು(ಗ್ರಾಕೈ) ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಆಡಳಿತ ಸಂಕೀರ್ಣ, ಸಿ-ಬ್ಲಾಕ್, ಕೊಠಡಿ ಸಂಖ್ಯೆ-ಸಿ-5, 2ನೇ ಮಹಡಿ ಚಿತ್ತಾಪುರ ರೋಡ್ ಯಾದಗಿರಿ - 585202**

☎: 08473-253791 G-Mail Id: ddkviyadgir@gmail.com


ಸಂಖ್ಯೆ: ಜಿಪಂಯಾ/ಉನಿ(ಗ್ರಾಕೈ)/ಪತ್ರಿಕಾ ಪ್ರಕಟಣೆ/2024-25 ದಿನಾಂಕ:-27.11.2024

## ಪತ್ರಿಕಾ ಪ್ರಕಟಣೆ

2024-25ನೇ ಸಾಲಿನ ಜಿಲ್ಲಾ ವಲಯ ಯೋಜನೆಯ "ಜಿಲ್ಲಾ ಉದ್ಯಮ ಕೇಂದ್ರ" ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಹೊಲಿಗೆಯಂತ್ರ ಹಾಗೂ "ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಯೋಜನೆ"ಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಗೌಂಡಿ ಕಸಬುದಾರರಿಗೆ ಉಚಿತವಾಗಿ ಉಪಕರಣ ವಿತರಿಸಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಪ್ರಯುಕ್ತ ಆಸಕ್ತರು ದಿನಾಂಕ:- 29.11.2024 ರಿಂದ ದಿನಾಂಕ:-28.12.2024ರ ವರೆಗೆ ವೆಬ್ ಸೈಟ್ https://zpyadgiri.karnataka.gov.in ಮತ್ತು https://yadgir.nic.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08473-253791ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

**ಅರ್ಜಿ ಸಲ್ಲಿಸಲು ಬೇಕಾಗುವ ದಾಖಲಾತಿಗಳು:**

1) ಜನ್ಮ ದಿನಾಂಕ ನಮೂದಿಸಿರುವ ದಾಖಲೆ. (ಎಸ್.ಎಸ್.ಎಲ್.ಸಿ ಅಂಕಪಟ್ಟಿ / ವರ್ಗಾವಣೆ ಪ್ರಮಾಣಪತ್ರ).
2) ಶೈಕ್ಷಣಿಕ ಅರ್ಹತೆ. (ವರ್ಗಾವಣೆ ಪ್ರಮಾಣಪತ್ರ / ಅಂಕಪಟ್ಟಿ)
3) ಜಾತಿ ಪ್ರಮಾಣ ಪತ್ರ. (ಪ.ಜಾ , ಪ.ಪಂ ಮತ್ತು ಅಲ್ಪಸಂಖ್ಯಾತರವರಿಗೆ ಮಾತ್ರ)
4) ಆದಾಯ ದೃಢೀಕರಣ ಪತ್ರ.
5) ಚಾಲ್ತಿಯಲ್ಲಿರುವ ಪಡಿತರ ಚೀಟಿ
6) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ.
7) ವೃತ್ತಿ ಪ್ರಮಾಣಪತ್ರ.
8) ರೂ. 20/- ಇ-ಸ್ಟ್ಯಾಂಪ್ ನಲ್ಲಿ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಪತ್ರ.
9) ಹೊಲಿಗೆ ತರಬೇತಿ ಪ್ರಮಾಣಪತ್ರ.
10) ವಿಕಲಚೇತನ ಪ್ರಮಾಣ ಪತ್ರ. (ವಿಕಲಚೇತನರಾಗಿದ್ದಲ್ಲಿ)

**ಷರತ್ತುಗಳು (ಸೂಚನೆಗಳು):**

1) ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
2) ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
3) ಆಯಾ ಗ್ರಾಮ ಪಂಚಾಯತಿಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ/ ತಾಲೂಕಿನ ಕೈಗಾರಿಕಾ ವಿಸ್ತರ್ಣಾಧಿಕಾರಿಯವರಿಂದ ಹೊಲಿಗೆ (ಟೈಲರಿಂಗ್/ಗೌಂಡಿ) ವೃತ್ತಿ ಮಾಡುತ್ತಿರುವ ಬಗ್ಗೆ ಧೃಢೀಕರಣ ಪ್ರಮಾಣಪತ್ರ.
4) ಕಳೆದ 3 ವರ್ಷದಲ್ಲಿ ಈ ಇಲಾಖೆಯಿಂದ ಹೊಲಿಗೆಯಂತ್ರ/ಗೌಂಡಿ ಸಲಕರಣೆಗಳನ್ನು ಪಡೆದಿದ್ದರೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
5) ಆಶಾ ಕಾರ್ಯಕರ್ತೆಯರು , ಅಂಗನವಾಡಿ ಹಾಗೂ ಸರಕಾರಿ ಅಂಗ ಸಂಸ್ಥೆಗಳಲ್ಲಿ ಕಾರ್ಯನಿರತರು ಅರ್ಜಿ ಸಲ್ಲಿಸಲು ಅನರ್ಹರು.

ಪುಟ-2ಕ್ಕೆ

Scanned with OKEN Scanner

6) ಯಾವುದೇ ಫಲಾನುಭವಿಯು ಕೇವಲ ಒಂದು ಅರ್ಜಿ ಸಲ್ಲಿಸಲು (ಹೊಲಿಗೆಯಂತ್ರ/ಗೌಂಡಿ) ಅವಕಾಶವಿರುತ್ತದೆ.
7) ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.
8) ಅಪ್ಲೋಡ್ ಮಾಡಿದ ಮೂಲ ದಾಖಲಾತಿಗಳು ಸ್ಪಷ್ಟವಾಗಿರಬೇಕು ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
9) ಆಯಾ ತಾಲೂಕಿನ ಅರ್ಜಿದಾರರು ಆಯಾ ತಾಲೂಕಿನಲ್ಲಿ ಅರ್ಜಿ ಸಲ್ಲಿಸಬೇಕು ಇಲ್ಲವಾದ್ವಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
10) ಕನಿಷ್ಠ 18 ವರ್ಷ ತುಂಬಿರಬೇಕು, ಎಸ್.ಸಿ / ಎಸ್.ಟಿ ವರ್ಗದವರಿಗೆ ಗರಿಷ್ಠ 40 ವರ್ಷ ಹಾಗೂ ಸಾಮಾನ್ಯ/ ಹಿಂದುಳಿದ ವರ್ಗದವರಿಗೆ / ಇತರೆ 38 ವರ್ಷ.

ಉಪ ನಿರ್ದೇಶಕರು(ಗ್ರಾಕೈ),
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ್, ಯಾದಗಿರಿ

Scanned with OKEN Scanner